ನಡೆಸಿದ್ದರು. ಆದಕಾರಣ ಈ ಯೋಜನೆಯನ್ನು ಜಾಗ್ರತೆ ಮುಂಗಿಸುವ ಸಾಧ್ಯತೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ನಮ್ಮ ಮೈಸೂರು ರಾಜ್ಯ ಪ್ರವಾಸಿಗರು ಬರುವುದಕ್ಕೆ ಒಂದು ಯೋಗ್ಯವಾದ ಸ್ಥಳವಾಗಿದೆ. ನಮ್ಮ ರಾಜ್ಯದಲ್ಲಿ ಚಾರಿತ್ರಿಕವಾದಂಥ ಸ್ಥಳಗಳಿವೆ. ಆರ್ಟ್ ದೃಷ್ಟಿಯಿಂದ, ಆರ್ಕಿಟೆಕ್ಚರ್ ದೃಷ್ಟಿಯಿಂದ ಉತ್ತಮವಾದಂಥ ಶಿಲಾ ಕೌಶಲ್ಯವುಳ್ಳ ಸ್ಥಳಗಳು ಮೈಸೂರು ನಗರದ ಸುತ್ತಮುತ್ತ ಇವೆ. ಹೊರಗಡೆಯಿಂದ ಬಂದಂಥ ಪ್ರವಾಸಿಗರು ಇದನ್ನೆಲ್ಲಾ ನೋಡಿಕೊಂಡು ಬಂದು ಪ್ರವಾಸಿಗರಿಗೆ ಇನ್ನೂ ಅನೇಕ ಸೌವಲತ್ತುಗಳನ್ನು ಇಟ್ಟರೆ ಪ್ರವಾಸಿಗರು ಮೈಸೂರು ರಾಜ್ಯಕ್ಕೆ ಹೆಚ್ಚು ಹೆಚ್ಚು ಬರುತ್ತಾರೆಂದು ತಿಳಿಸಿದ ಪ್ರಯುಕ್ತ ನಮ್ಮ ರಾಜ್ಯದಲ್ಲಿ ಪ್ರವಾಸೀ ಕೇಂದ್ರಗಳನ್ನು ಹೆಚ್ಚು ಹೆಚ್ಚು ತೆರೆಯಬೇಕೆಂದಿದ್ದೇವೆ. ಅದರಲ್ಲಿ ಈ ನೆಹರೂ ಲೋಕವೂ ಒಂದಾಗಿದೆ. ಲಾಸ್ಯಾಂಜಿಲಿಸ್ ಬಳಿ ಡಿಸ್ನಿಲ್ಯಾಂಡ್ ಎಂದು ಮಾಡಿದ್ದಾರೆ. ಅದೇ ರೀತಿಯಲ್ಲಿ ನೆಹರೂ ಲೋಕವನ್ನು ಸ್ಥಾಪಿಸಬೇಕೆಂದಿದ್ದೇವೆ. ದೇಶದ ಸಂಪತ್ತನ್ನು ಹೆಚ್ಚಿಸುವುದಕ್ಕೆ ನಾವು ನಾನಾ ರೀತಿಯಿಂದ ಪ್ರಯತ್ನ ಮಾಡಬೇಕಾಗಿದೆ. ಅದಕ್ಕೆ ಮಾನ್ಯ ಸದಸ್ಯರು ಒಪ್ಪುತ್ತಾರೆಂದು ತಿಳಿದಿದ್ದೇನೆ. ಡಾಲರ್ ಮತ್ತು ಸ್ಟರ್ಲಿಂಗ್ ನಾಣ್ಯಗಳ ಅಗತ್ಯ ನಮಗೆ ಬೇಕಾಗಿದೆ. ನಮಗೆ ಫಾರಿನ್ ಎಕ್ಸ್‌ಚೇಂಜ್ ಬೇಕಾಗಿದೆ. ನಮಗಿಂತ ಹಿಂದುಳಿದಿರುವ ದೇಶಗಳು ಈಗಾಗಲೇ ಟೂರಿಸಂ ವಿಚಾರದಲ್ಲಿ ಮುಂದುವರೆದು ಕೋಟಿಗಟ್ಟಲೆ ಫಾರಿನ್ ಎಕ್ಸ್‌ಚೇಂಜ್‌ನ್ನು ಸಂಪಾದನೆ ಮಾಡುತ್ತಿವೆ. ನಮ್ಮ ರಾಜ್ಯದಲ್ಲಿ ಚಾರಿತ್ರಿಕ ಹಿನ್ನೆಲೆ ಇದ್ದರೂ ಕೂಡ ಅದನ್ನು ನಾವು ಸರಿಯಾಗಿ ಉಪಯೋಗಿಸಿಕೊಂಡಿಲ್ಲ. ಈ ದೃಷ್ಟಿಯಿಂದ ಮೈಸೂರು ರಾಜ್ಯದಲ್ಲಿ ಪ್ರವಾಸಿಗರನ್ನು ಆಕರ್ಷಣೆ ಮಾಡುವುದಕ್ಕೆ ಚಾಮುಂಡಿ ಬೆಟ್ಟದ ಬಳಿ ನೆಹರೂ ಲೋಕವನ್ನು ಸ್ಥಾಪಿಸುವುದು ಕೂಡ ಒಂದು ಯೋಗ್ಯವಾದ ಕಾರ್ಯಕ್ರಮವಾಗಿದೆ. ಮೈಸೂರು ನಗರದಲ್ಲಿ ಒಳ್ಳೆಯ ಕಟ್ಟಡಗಳಿವೆ. ಸುಂದರವಾದ ಅರಮನೆ ಇದೆ. ನಾನು ಸಹ ಅನೇಕ ಕಟ್ಟಡಗಳನ್ನು ನೋಡಿದ್ದೇನೆ. ಆದರೆ ಆರ್ಕಿಟೆಕ್ಚರ್ ದೃಷ್ಟಿಯಿಂದ ಮೈಸೂರು ನಗರದಲ್ಲರುವ ಕಟ್ಟಡಗಳು ಚೆನ್ನಾಗಿವೆ. ಲಲಿತಮಹಲ್ ಅರಮನೆ ಇದೆ. ಇದನ್ನು ಕೂಡ ಟೂರಿಸ್ಟ್ ಹೋಟೆಲ್ ಆಗಿ ಪರಿವರ್ತನೆ ಮಾಡಿದ್ದೇವೆ. ಪ್ರಕೃತಿ ರಮ್ಯವಾದ ಚಾಮುಂಡಿ ಬೆಟ್ಟವಿದೆ. ಮಾನ್ಯ ವಾಟಾಳ್ ನಾಗರಾಜ್ ಅವರ ತಲೆ ಫಲವತ್ತಾಗಿದೆ. ಅವರು ಇಂತಹ ವಿಷಯಗಳಲ್ಲಿ ಒಳ್ಳೊಳ್ಳೆಯ ಸಲಹೆಗಳನ್ನು ಕೊಡುವವರಾಗಿರುವುದರಿಂದ ಈ ನೆಹರೂ ಲೋಕದ ಬಗ್ಗೆ ಸಮಿತಿಯನ್ನು ರಚಿಸಿದಾಗ ಅವರ ಹೆಸರನ್ನು ಸೇರಿಸುವುದಕ್ಕೆ ಮಾನ್ಯ ಕಾರ್ಮಿಕ ಮಂತ್ರಿಗಳು ಯೋಚನೆ ಮಾಡಬಹುದು. ಈ ಯೋಜನೆಯನ್ನು ಕಾರ್ಯಗತ ಗೊಳಿಸಲು ಒಂದು ಕಾಲದಲ್ಲಿ ಕೇಂದ್ರ ಸರ್ಕಾರದವರು 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಆದರೆ ಏನು ಕಾರಣವೋ ಮುಂದೆ ಬಿಟ್ಟು ಹೋಗಿದೆ. ಮತ್ತೆ ಅದನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

(ಮೂರು ನಾಲ್ಕು ಜನ ಮಾನ್ಯ ಸದಸ್ಯರು ಪ್ರಶ್ನೆ ಕೇಳಲು ಎದ್ದು ನಿಂತರು)

Mr. DEPUTY SPEAKER.—The matter is undecided. The Chief Minister had made the position clear. There are a number of questions. I call the Next question.

Sri H. S. SIDDAPPA.—In view of the Chief Minister's Statement, I congratulate Sri Vatal Nagaraj.

Tour of Assistant Charity Commissioner, Belgaum Division

160. Sri P. M. BANGI (Jamkhandi).—

Will the Minister for Revenue be pleased to state :—

(*a*) whether it is not a fact that the Assisitant Charity Commissioner, Belgaum Division used to tour all the four districts of North-Karnataka previously to condut enquiries in his camps at Taluka and District places and used to take decision on the spot ;

(*b*) if so, the reason for discontinuing such tour ?

Sri N. HUTCHAMASTHY GOWDA (Minister for Revenue)—

(*a*) Yes.

(*b*) The Assistant Charity Commissioner continues to undertake these tours now.

9-30 A.M.

ಶ್ರಿ ಪಿ. ಎಂ. ಭಂಗಿ.—ಉತ್ತರ ಕರ್ನಾಟಕದ ಬೆಳಗಾಂವಿ ವಿಭಾಗದ ಕೆಲವು ಜಿಲ್ಲಾ ಹಾಗೂ ತಾಲ್ಲೂಕುಗಳಲ್ಲಿ ಹಿಂದಿನಿಂದಲೂ ಪ್ರವಾಸ ಕೈಗೊಂಡು ಆ ಪ್ರದೇಶದಲ್ಲಿ ಇತ್ತೀಚೆಗೆ ಪ್ರವಾಸ ಮಾಡದಿರಲು ಕಾರಣಗಳೇನು ? ಅಲ್ಲ ಕೆಲವು ಭಾಗಗಳು ನಿರ್ಜನ ಪ್ರದೇಶವೆಂದು ಪ್ರವಾಸ ಕೈಗೊಳ್ಳಲಿಲ್ಲವೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಗಿದ್ದಂಥ ಅಧಿಕಾರಿಗಳಾದ ಸಹಾಯ ಧರ್ಮಾದಾಯ ಕಮಿಷನರ್ ಅವರು ಟೂರ್ ಮಾಡತಕ್ಕ ವಿವರಗಳನ್ನು ಮೇಲಿನ ಆಫೀಸರುಗಳಿಗೆ ತಿಳಿಸದೆ ಹೋಗಿದ್ದುದು ಒಂದು ಕಾರಣ. ಎರಡನೆಯ ಕಾರಣ, ಒಂದೇ ಸಮ 8 ದಿವಸಗಳಿಗಿಂತಲೂ ಹೆಚ್ಚು ಪ್ರವಾಸ ಮಾಡಬಾರದು ಮತ್ತು ಒಂದು ತಿಂಗಳಲ್ಲಿ 16 ದಿವಸಗಳಿಗಿಂತಲೂ ಹೆಚ್ಚಿಗೆ ಟೂರ್ ಮಾಡಬಾರದೆಂಬ ವಿಷಯವನ್ನು ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸದೇ ಇದ್ದುದು. ಅವರು ಸ್ವೇಚ್ಛೆಯಾಗಿ ಟೂರ್ ಮಾಡುತ್ತಾ ಇದ್ದುಕಾರಣದಿಂದ ಅದಿನ್ನೂ ಜಾಸ್ತಿ ಆಗಬಾರದೆಂಬ ದೃಷ್ಟಿಯಿಂದ ಆಗಿದ್ದಂಥ ಅಧಿಕಾರಿಗಳೇ ಅದನ್ನು ನಿಲ್ಲಿಸಿದರು.

ಶ್ರೀ ಗೋಪಿನಾಥ್ ಆರ್. ನಾಂದ್ರ.—ಈಗ ಅದನ್ನು ರೀಕನ್‌ಸಿಡರ್ ಮಾಡುತ್ತೀರಾ ? ಪುನಃ ಟೂರ್ ಮಾಡುವುದಕ್ಕೆ ಏನಾದರೂ ಆದೇಶವನ್ನು ಕೊಟ್ಟಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಅದನ್ನು ನರಿ ಮಾಡಬೇಕೆಂದು ತಿಳಿಸಿದ್ದೇವೆ.

ಶ್ರೀ ಪಿ. ಎಂ. ಭಂಗಿ.—ಈ ಅಧಿಕಾರಿಯು ಸರ್ಕಾರದ ಕಾನೂನಿಗೆ ವಿರೋಧವಾಗಿ ಸ್ವೇಚ್ಛೆಯಾಗಿ ಮೇಲಧಿಕಾರಿಗಳ ಗಮನಕ್ಕೆ ತಾರದೆ ಟೂರ್ ಮಾಡುತ್ತಾ ಇದ್ದರೆಂದು ಮಂತ್ರಿಗಳೂ ಹೇಳಿದರು. ಹಾಗೆ ಮಾಡಿದ್ದಕ್ಕೆ ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಗಿದ್ದಂಥ ಮೇಲ್ಪಟ್ಟ ಅಧಿಕಾರಿಗಳು ಅವರ ಗಮನಕ್ಕೆ ತರದೆ ಯಾವೊಬ್ಬ ಅಧಿಕಾರಿಯೂ ಆ ರೀತಿಯಾಗಿ ಇನ್ನುಮುಂದೆ ಟೂರ್ ಮಾಡಬಾರದೆಂದು ತಿಳಿಸಿದ್ದರು.

Deprival of Some Benefits to Local Candidates

165. Sri G. P. NANJAYYANAMATH (Guledgud).—

Will the Chief Minister be pleased to state :—

(*a*) whether it has come to the notice of Government that local candidates whose services have been regularised in 1970 are deprived of increment, leave and other benefits to which local candidates whose services were regularised on 1st January 1965 were entitled ;

(*b*) whether it has come to the notice of Government that this has resulted in economic hardship to these candidates both before and after retirement ; and

(*c*) the reason for this discrimination ?